ಸಮಾಜ ಅವಳನ್ನು ನಡೆಸಿಕೊಳ್ಳೋ ರೀತಿ ಬಗ್ಗೆ ನನಗೆ ಬಾಲ್ಯದಿಂದಲೂ ಬೇಸರ. ಅಪ್ರಜ್ಞಾಪೂರ್ವಕವಾಗಿ ಇವೆಲ್ಲ ಕಾರಣಗಳು ನನ್ನನ್ನು ಪ್ರಭಾವಿಸಿ ಈ ಅನುವಾದಕ್ಕೆ ಕಾರಣ ಆಗಿರಬೇಕು.

**◆ ನೀವು ಈ ಅನುವಾದ ಪುಸ್ತಕದಲ್ಲಿ ಬರೆಯೋ ಹಾಗೆ, '..ಮುಂದೆ ಹೆಣ್ಣು, ಗಂಡು ಒಂದೇ ಅನ್ನುವ ದಿನ ಬರುವುದರಲ್ಲಿ ಸಂದೇಹವಿಲ್ಲ. ಆಗ ಅನ್ಯಾಯ, ಹಿಂಸೆ, ತಾರತಮ್ಯಗಳು ಕೊನೆಯಾಗಿ ಹೆಣ್ಣುಗಳು ಕಟ್ಟಬಲ್ಲರು ಅಥವಾ ಕೆಡವಬಲ್ಲರು ಎನ್ನುವುದು ನಿಜವಾಗುತ್ತದೆ. ಇಂತಹ ಒಂದು ಕಾಲ ಬರುವುದೆಂದು ನನಗೆ ಆಶಾಭಾವನೆ ಇದೆ'. ಎಂದಾದರೂ ಇಂತಹ ಲೋಕ ಸೃಷ್ಟಿಯಾಗಬಹುದು ಅಂತ ಅನ್ನಿಸುತ್ತ?**

ನಾವು ಹೆಣ್ಣುಮಕ್ಕಳು ಏನು ಪಡೆಯಬೇಕು ಅನ್ನೋದನ್ನ ತಿಳಿದು, ಸಂಯಮದಿಂದ ಮತ್ತು ಅರಿವಿನಿಂದ ಅದಕ್ಕೋಸ್ಕರ ಕೆಲಸ ಮಾಡಿದರೆ ನಿಧಾನಕ್ಕೆ ಅಂತಹ ಕಾಲ ಬರಬಹುದು ಅನ್ಸುತ್ತೆ. ನಮಗೆ ಸ್ವಾತಂತ್ರ್ಯ ಬೇಕು ನಿಜ, ಆದರೆ ಕಡಿವಾಣ ಇಲ್ಲದೆ ಅದನ್ನು ಬಳಸಿದರೆ ಇರುವ ಸಮಸ್ಯೆ ಕಗ್ಗಂಟಾಗುತ್ತೆ. ಹನಿಟ್ರ್ಯಾಪ್, ಮೋಜು, ಐಷಾರಾಮ ಇದಕ್ಕೆಲ್ಲ ಈಗಿನ ಯುವಕರು, ಹೆಣ್ಣುಮಕ್ಕಳು ಬಲಿ ಆಗ್ತಾ ಇರೋದನ್ನು ನೋಡಿದ್ರೆ ಸಂಕಟ ಆಗುತ್ತೆ. ಕುಟುಂಬದ, ಸಮಾಜದ ಹಿರಿಯರು ಇದನ್ನು ತಿದ್ದಬೇಕು, ಆದರೆ ಅವರುಗಳೇ ಅಡ್ಡಮಾರ್ಗ ಹಿಡಿದಿದ್ದಾರೆ. ಇವತ್ತಿನ ಕಾಲಧರ್ಮವೇ ಹೀಗಾಗಿ ಹೋಗಿದೆ... ದೇಶ ಸ್ವಾತಂತ್ರ್ಯ ಪಡೆಯೋಕೆ ಎಷ್ಟು ಜನ ಎಷ್ಟು ಕಷ್ಟ ಪಟ್ಟರು ಅಲ್ವಾ? ಇದರ ಬಗ್ಗೆ ನಾವ್ಯಾರೂ ಯೋಚಿಸ್ತಿಲ್ಲ...

**◆ ಆದರ್ಶಗಳು, ಮಾದರಿ ನಾಯಕರೇ ಇಲ್ಲದ ಈ ಕಾಲದಲ್ಲಿ ನೀವು ಹೇಳ್ತಾ ಇರೋದು ಸಾಧ್ಯವಾ?**

ಹೌದು... ಈಗ ಅನಾಯಕತ್ವದ ಕಾಲ. ನಾನು ಹೇಳ್ತಾ ಇರೋದು ಕಷ್ಟ... ಆದರೆ ಅಸಾಧ್ಯ ಅಲ್ಲ.

**◆ ಕುವೆಂಪು ಅವರ ಜೊತೆಗಿನ ನಿಮ್ಮ ನೆನಪುಗಳು ಸಾಕಷ್ಟಿವೆ. ಅವುಗಳನ್ನೆಲ್ಲ ಒಟ್ಟಾಗಿ ಬರೆದರೆ ನೂರಾರು ಪುಟಗಳ ಪುಸ್ತಕವಾಗುತ್ತದೆ. ನಿಮ್ಮ ಮನಸ್ಸಿನಲ್ಲಿ ಬೀಡು ಬಿಟ್ಟಿರುವ ಒಂದೆರಡು ಘಟನೆಗಳನ್ನು ಹೇಳಬಹುದಾ?**

ಓಹ್, ಖಂಡಿತ. ಕುವೆಂಪು, ತೇಜಸ್ವಿ ಅವರ ನೆನಪುಗಳಿಗಿಂತ ಬೇರೆ ಸಂತೋಷ ಏನಿದೆ?

ಕುವೆಂಪು ಅವರು ಸಾಮಾನ್ಯವಾಗಿ ಸಾಯಂಕಾಲ ನಾಲ್ಕು ಗಂಟೆಗೆ ಕಾಫಿ ಕುಡಿದು ವರಾಂಡದಲ್ಲಿ ಕುಳಿತಿರುತ್ತಿದ್ದರು. ನಾನು ಆ ಹೊತ್ತಿನಲ್ಲಿ ಹೋಗುತ್ತಿದ್ದೆ. ನಾನು ಹೋದ ಕೂಡಲೆ 'ಪದ್ಮಾ ಬನ್ನಿ' ಅಂದು, ತಾರಿಣಿಯವರಿಗೆ, 'ಅಕ್ಕಾ... ಪದ್ಮಾ ಬಂದಿದ್ದಾರೆ ನೋಡಿ' ಅನ್ನುತ್ತಿದ್ದರು. ನಮ್ಮ ಮನೆಯಲ್ಲಿ ಆಗ ತುಂಬ ಬೆಟ್ಟದಾವರೆ, ಗುಲಾಬಿ ಹೂವಿನ ಗಿಡಗಳಿದ್ದವು. ನಾನು ಕುವೆಂಪು ಅವರ ಮನೆಗೆ ಹೋಗುವಾಗ ಕೆಲವೊಮ್ಮೆ ಹೂಗಳನ್ನು ತೆಗೆದುಕೊಂಡು ಹೋಗುತ್ತಿದ್ದೆ. ಯಾವಾಗಾದರೂ ಹೂವನ್ನು ಕೊಂಡೊಯ್ಯದೆ ಇದ್ದಾಗ ಅವರು, 'ಪದ್ಮಾ... ಹೂ ತಂದಿಲ್ವಾ?' ಅಂತ ಕೇಳುತ್ತಿದ್ದರು.

ಒಂದು ಸಾರ್ತಿ ನಾನು ಹಾಸನದ ನನ್ನ ತಾಯಿ ಮನೆಗೆ ಹೋಗಿದ್ದೆ. ಮೂಡಿಗೆರೆಗೆ ಹೋಗಿ ಬರೋಣ ಅಂತ ರಾಜೇಶ್ವರಿ ಅವರಿಗೆ ಕರೆ ಮಾಡಿದೆ. ರಾಜೇಶ್ವರಿಯವರು ಮೂಡಿಗೆರೆಗೆ ಕುವೆಂಪು ಮತ್ತು ಹೇಮಾವತಿ ಅವರು ಬಂದಿರುವ ವಿಷಯ ತಿಳಿಸಿದರು. ಹಾಗಾಗಿ ನಾನು ಹೋಗೋದು ಸರಿ ಅಲ್ಲ ಅನ್ನಿಸಿ ಸುಮ್ಮನಾದೆ. ಸ್ವಲ್ಪ ಹೊತ್ತಿಗೆ ನನಗೆ ಕರೆ ಬಂತು, ಹೇಮಾವತಿ ಅವರು ಮಾಡಿದ್ದ ಕರೆ ಅದು. ಅತ್ತ ಕಡೆಯಿಂದ ಅವರು, 'ನೀವು ಯಾಕೆ ಮೂಡಿಗೆರೆಗೆ ಬರಲ್ಲ ಅಂತೀರ, ನನಗೋಸ್ಕರ ಬನ್ನಿ' ಅಂದರು. ಅಷ್ಟು ದೊಡ್ಡವರು ಕರೆಯುವಾಗ ನಾನು ಹೋಗದೆ ಇರೋದು ಹೇಗೆ? ಹೋದೆ. ಆ ದಿನ ಅಲ್ಲೇ ಉಳಿದೆ. ಅವತ್ತಿನ ದಿನ ಸಂಜೆ ಏನಾಯ್ತು ಅಂದ್ರೆ... ತೇಜಸ್ವಿ ಮನೆಯ ಹಾಲ್‌ನಲ್ಲಿ ರಾಮಕೃಷ್ಣ ಪರಮಹಂಸರ ಫೋಟೋ ಇದೆ. ಅದರ ಮುಂದೆ ಕುವೆಂಪು ಅವರು ಕುಳಿತು, ಗಂಧದ ಕಡ್ಡಿ ಹತ್ತಿಸಿ ಪ್ರಾರ್ಥನೆ ಮಾಡಲು ಶುರುಮಾಡಿದರು. ಹೇಮಾವತಿ ಅವರು, ತೇಜಸ್ವಿ ಮಕ್ಕಳೂ ಇದ್ರು. ನಾನು ಅಲ್ಲೇ ಹಿಂದುಗಡೆ ಕುಳಿತೆ. ಕುವೆಂಪು ಅವರು ಶ್ಲೋಕಗಳನ್ನ ಹೇಳಿದ್ರು. ಎಲ್ಲ ಆದ ಮೇಲೆ, ಉದುರಿದ್ದ ಗಂಧದ ಕಡ್ಡಿಯ ಪುಡಿಯನ್ನ ಕುವೆಂಪು ಅವರು ಹಣೆಗೆ ಇಟ್ಟುಕೊಂಡರು. ಅಂತಹ ದೊಡ್ಡ ಮನುಷ್ಯರ ಜೊತೆಯಲ್ಲಿ ಕೂತು ಪ್ರಾರ್ಥನೆ ಮಾಡೋ ಅವಕಾಶ